**ದಿನಾಂಕಃ 09.12.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ ಪ್ರತಿವಾದಿ 6 ಮತ್ತು 7 ಪರ ಶ್ರೀ ಎಂ ಎಸ್ ಪಿ ವಕೀಲರಿಂದಃ-**

1977 ರ ಕ್ರಯಪತ್ರದಲ್ಲಿ ದಾವಾ ಅನುಸೂಚಿ 1 ಮತ್ತು 2 ಆಸ್ತಿಯಲ್ಲಿ ನಾಲ್ಕು ಅಂಗಡಿ ಮತ್ತು ಮಹಡಿಯಲ್ಲಿ ಇರುವ ಶೀಟ್ ಮನೆಯ ಬಗ್ಗೆ ಉಲ್ಲೇಖ ಇರಲಿಲ್ಲ. ನಾನು ಶೀಟ್ ಮನೆ ಕಟ್ಟಿಸಿದ್ದು 101/1 ಸಿ ಯಲ್ಲಿ ಇರುತ್ತದೆ. ಆ ರೀತಿ ಸದರಿ ಶೀಟ್ ಮನೆ ಕಟ್ಟಿಸಿದ ಬಗ್ಗೆ ದಾಖಲೆಗಳು ನನ್ನ ಬಳಿ ಇದೆ ಅದನ್ನು ಹಾಜರುಪಡಿಸಿದ್ದೇನೆ. ದಾವಾ ಅನುಸೂಚಿ 1 ಆಸ್ತಿ ನನ್ನ ಭಾಗಕ್ಕೆ ಬಂದಿರುತ್ತದೆ. ದಾವಾ ಅನುಸೂಚಿ 2 ಆಸ್ತಿ ನನಗೆ ಪಿತ್ರಾರ್ಜಿತವಾಗಿ ಬಂದಿದೆ. ಸದರಿ ಆಸ್ತಿ ಪಿತ್ರಾರ್ಜಿತವಾಗಿ ಬಂದಿದೆ ಎಂದು ತೋರಿಸುವ ಬಗ್ಗೆ ದಾಖಲೆ ಇದೆ. ದಾವಾ ಅನುಸೂಚಿ 2 ಆಸ್ತಿಗೂ ವಿಭಾಗಪತ್ರದಲ್ಲಿ ನಾರಾಯಪ್ಪನಿಗೆ ಬಂದ ಆಸ್ತಿಗೂ ಯಾವುದೇ ಸಂಬಂಧ ಇಲ್ಲ. 1998 ರಲ್ಲಿ ಆದ ವಿಭಾಗಪತ್ರಕ್ಕೂ ದಾವಾ ಅನುಸೂಚಿ 2 ಆಸ್ತಿಗೂ ಸಂಬಂಧ ಇಲ್ಲ. ದಾವಾ ಅನುಸೂಚಿ 2 ಆಸ್ತಿಯಲ್ಲಿ ಇರುವ 4 ಅಂಗಡಿ ಮಳಿಗೆಗಳು ಮತ್ತು 1 ಮಹಡಿಯಲ್ಲಿ ಇರುವ ಶೀಟ್ ಮನೆ ನನ್ನದು ಎಂದು ತೋರಿಸುವ ಬಗ್ಗೆ ದಾಖಲೆಗಳು ಇದೆ. ಸದರಿ ದಾವಾ ಅನುಸೂಚಿ 1 ಮತ್ತು 2 ಆಸ್ತಿಗಳಲ್ಲಿ ಪ್ರತಿವಾದಿ 6 ಮತ್ತು 7 ರವರು ಯಾವುದೇ ಮನೆ ಕಟ್ಟಿಲ್ಲ.

7 ನೇ ಪ್ರತಿವಾದಿ ಶ್ರೀಮತಿ ಟಿ ಕೆ ರಮ್ಯ ಇವರು 2011 ರಲ್ಲಿ ಮನೆ ಕಟ್ಟಿದ್ದಾರೆ ಅನ್ನುವುದು ಸರಿಯಲ್ಲ. 6 ಮತ್ತು 7 ನೇ ಪ್ರತಿವಾದಿಗಳ ಮನೆ ಒಂದಕ್ಕೊಂದು ಹೊಂದಿಕೊಂಡಿದೆ ಅನ್ನುವುದು ಸರಿಯಲ್ಲ. ನಾನು 2017 ನೇ ಇಸವಿಯಲ್ಲಿ ಈ ದಾವೆ ಹಾಕಿದ್ದೇನೆ ಅನ್ನುವುದು ನಿಜ. ಈ ದಾವೆಯಲ್ಲಿ 7 ನೇ ಪ್ರತಿವಾದಿಯನ್ನು ಏಕೆ ಪಕ್ಷಕಾರರನ್ನಾಗಿ ಮಾಡಿದ್ದೀರಿ ಎಂದರೆ ಸಾಕ್ಷಿಯು 7 ನೇ ಪ್ರತಿವಾದಿ ತೆಗೆದುಕೊಂಡ ನಿವೇಶನವೇ ಬೇರೆ ಮನೆ ಕಟ್ಟಿದ ನಿವೇಶನವೇ ಬೇರೆ ಎಂದು ಹೇಳುತ್ತಾರೆ. ಪ್ರತಿವಾದಿ 7 ರವರು ಕಟ್ಟಿದ ಮನೆ ಯಾವ ಸರ್ವೇನಂಬರ್ ನಲ್ಲಿ ಇದೆ ಅಥವಾ ಸಿ ಟಿ ಎಸ್ ನಂಬರ್ ಅಥವಾ ಆಸ್ತಿಯ ನಂಬರ್ ಯಾವುದು ಎಂದು ನನಗೆ ಹೇಳಲು ಆಗುವುದಿಲ್ಲ.

6 ನೇ ಪ್ರತಿವಾದಿ ವೀರಣ್ಣ ಇವರು ರಾಮಪ್ಪ ಅವರಿಗೆ ಸೇರಿದ ಆಸ್ತಿಯಲ್ಲಿ ಮನೆ ಕಟ್ಟಿದ್ದಾರೆ ಎಂದರೆ ಸಾಕ್ಷಿಯು ರಾಮಪ್ಪನಿಗೆ ಬಂದ 8 ಗುಂಟೆ ಆಸ್ತಿಯನ್ನು

ಪೂರ್ತಿ ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ. 1974 ರಲ್ಲಿ ಆದ ವಿಭಾಗಪತ್ರದಲ್ಲಿ ರಾಮಪ್ಪ ಮತ್ತು ಅವರ ಸಹೋದರರಿಗೆ ತಲಾ 8 ಗುಂಟೆ ಜಮೀನು ಬಂದಿತ್ತು ಅನ್ನುವುದು ಸರಿಯಲ್ಲ. 1974 ರ ವಿಭಾಗಪತ್ರದ ಪ್ರಕಾರ ನಾರಾಯಣಪ್ಪನಿಗೆ 8 ಗುಂಟೆ ಜಮೀನು ಬಂದಿದೆ ಅನ್ನುವುದು ನಿಜ. ಸದರಿ 8 ಗುಂಟೆ ಜಮೀನಿನಲ್ಲಿ ನಾರಾಯಣಪ್ಪ ನನಗೆ 3 ಗುಂಟೆ ಜಮೀನು ಮಾರಾಟ ಮಾಡಿದ್ದಾರೆ ಅನ್ನುವುದು ಸರಿಯಲ್ಲ. ಉಳಿದ 5 ಗುಂಟೆ ಜಮೀನಿನಲ್ಲಿ ನಾರಾಯಣಪ್ಪ ಈತನು ತಲಾ ಒಂದುಮುಕ್ಕಾಲು ಗುಂಟೆ ಜಮೀನನ್ನು ಅವನ ಸಹೋದರರಾದ ರಾಮಪ್ಪ, ನಾರಾಯಣಪ್ಪ ಮತ್ತು ಸೀನಪ್ಪ ಇವರಿಗೆ ಕೊಟ್ಟಿದ್ದರು ಅನ್ನುವ ಬಗ್ಗೆ ನನಗೆ ಗೊತ್ತಿಲ್ಲ.

ರಾಮಪ್ಪ, ನಾರಾಯಣಪ್ಪ ಮತ್ತು ಸೀನಪ್ಪ ಇವರ ಹಿರಿಯ ಸಹೋದರ ರಾಮಕೃಷ್ಣಪ್ಪ ಎನ್ನುವುದು ನಿಜ. ಸದರಿ ರಾಮಕೃಷ್ಣಪ್ಪ ಈತನು ನನಗೆ 3 ಗುಂಟೆ ಜಮೀನು ಮಾರಾಟ ಮಾಡಿದ್ದಾನೆ ಅನ್ನುವುದು ನಿಜ. ಸಾಕ್ಷಿ ಸ್ವತಃ ಆ ರೀತಿ 3 ಗುಂಟೆ ಜಮೀನು ನನಗೆ ಮತ್ತು ನನ್ನ ಚಿಕ್ಕಮ್ಮ ಮುನಿಯಮ್ಮ ಅವರಿಗೆ ಮಾರಾಟ ಮಾಡಿದ್ದರು ಎಂದು ಹೇಳುತ್ತಾರೆ. ಸದರಿ ನಾವು ಖರೀದಿಸಿರುವ 3 ಗುಂಟೆ ಜಮೀನಿನ ಬಗ್ಗೆ ನಮ್ಮ ಮತ್ತು ಮುನಿಯಮ್ಮನ ಮಧ್ಯೆ ಯಾವುದೇ ವಿವಾದ ಇಲ್ಲ. ಸದರಿ 3 ಗುಂಟೆ ಜಮೀನಿನ ಬಗ್ಗೆ ರಾಮಕೃಷ್ಣಪ್ಪ ಹಾಗೂ ಆತನ ಸಹೋದರರ ಮಧ್ಯೆ ಯಾವುದೇ ವಿವಾದ ಇಲ್ಲ ಅನ್ನುವ ಬಗ್ಗೆ ನನಗೆ ಗೊತ್ತಿಲ್ಲ.

ನಿಪಿ.35 ದಿಃ 08.10.2003 ರ ಪ್ರಕಾರ 1, 4 ಮತ್ತು 5 ನೇ ಪ್ರತಿವಾದಿಗಳು ಕೆ . ರಾಜುರವರಿಗೆ ಕ್ರಯಪತ್ರ ಮಾಡಿಕೊಟ್ಟಿದ್ದಾರೆ ಅನ್ನುವುದು ನಿಜ. ನಿಪಿ.35 ಕ್ರಯಪತ್ರದ ಅನುಸೂಚಿ ಆಸ್ತಿಯಲ್ಲಿ ಆಸ್ತಿ ನಂಬರ್ 100/2 ಮತ್ತು 100/3 ಎಂದು ಉಲ್ಲೇಖಿಸಿದ್ದಾರೆ ಅನ್ನುವುದು ನಿಜ. ಸದರಿ ಆಸ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲ ಅನ್ನುವುದು ನಿಜ. ನಿಪಿ.35 ದಾಖಲೆ ಏಕೆ ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿಯು ರಾಮಪ್ಪನವರಿಗೆ ಮಾರಾಟ ಮಾಡಲು ಯಾವುದೇ ಆಸ್ತಿ ಉಳಿದಿರಲ್ಲಿ ಎಂದು ತೋರಿಸುವ ಬಗ್ಗೆ ಅದನ್ನು ಹಾಜರುಪಡಿಸಿದ್ದೇನೆ ಎಂದು ಹೇಳುತ್ತಾರೆ. ನಿಪಿ.35 ರ ಆಸ್ತಿಯನ್ನು ಖರೀದಿಸಿದ ರಾಜುರವರು ಸದರಿ ಆಸ್ತಿಯನ್ನು ಸ್ವಾ ಧೀನ ಹೊಂದಿದ್ದಾರೆ ಎಂದರೆ ಸಾಕ್ಷಿಯ ಕಟ್ಟಡ ಕಟ್ಟಿ ಮಾರಾಟ ಮಾಡಿದ್ದಾರೆ ಎಂದು ಹೇಳುತ್ತಾರೆ.

ನಿಪಿ.36 ದಿಃ 01.03.2010 ರ ಪ್ರಕಾರ 1, 4 ಮತ್ತು 5 ನೇ ಪ್ರತಿವಾದಿಗಳು ಪ್ರಶಾಂತ್ ರವರಿಗೆ ಕ್ರಯಪತ್ರ ಮಾಡಿಕೊಟ್ಟಿದ್ದಾರೆ ಅನ್ನುವುದು ನಿಜ. ನಿಪಿ.36

ಕ್ರಯಪತ್ರದ ಅನುಸೂಚಿ ಆಸ್ತಿಯಲ್ಲಿ ಆಸ್ತಿ ನಂಬರ್ 100/2 ಮತ್ತು 100/3 ಎಂದು ಉಲ್ಲೇಖಿಸಿದ್ದಾರೆ ಅನ್ನುವುದು ನಿಜ. ಸದರಿ ಆಸ್ತಿ ತವರೇಕೆರೆಯಲ್ಲಿ ಇದೆ ಅನ್ನುವುದು ನಿಜ. ಸದರಿ ಆಸ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲ ಅನ್ನುವುದು ನಿಜ.

ರಾಮಪ್ಪನವರು ಉಳಿದ ಜಮೀನನ್ನು ವಿಭಾಗಪತ್ರದ ಮೂಲಕ ವಿಲೇವಾರಿ ಮಾಡಿದ್ದಾರೆ ಎಂದರೆ ಸಾಕ್ಷಿಯು ವಿಭಾಗಪತ್ರ ಮಾಡಿಕೊಟ್ಟಿರುತ್ತಾರೆ, ಜಮೀನು ಇರುವುದಿಲ್ಲ. ವಿಭಾಗಪತ್ರದಲ್ಲಿ ಇರುವ ಜಮೀನಿಗೂ ನಿಮಗೂ ಸಂಬಂಧ ಇಲ್ಲ ಎಂದರೆ ಸಾಕ್ಷಿಯು ನಮಗೆ ಸೇರಿದ ಜಮೀನನ್ನು ವಿಭಾಗಪತ್ರದಲ್ಲಿ ಕಾಣಿಸಿದ್ದಾರೆ ಎಂದು ಹೇಳುತ್ತಾರೆ. ನಾನು ಸತತವಾಗಿ ಪ್ರತಿವಾದಿಗಳಿಗೆ ತೊಂದರೆ ಕೊಡವ ಕಾರಣ ಪ್ರತಿವಾದಿಗಳು ದಾವೆಯಲ್ಲಿ ಕೌಂಟರ್ ಕ್ಲೇಮ್ ಕೇಳಿದ್ದಾರೆ ಅನ್ನುವುದು ಸರಿಯಲ್ಲ. ಪ್ರತಿವಾದಿಗಳು ದಾವೆಯಲ್ಲಿ ಮಾಡಿದ ಕೌಂಟರ್ ಕ್ಲೇಮ್ ಸುಳ್ಳು ಇರುತ್ತದೆ. ಕೌಂಟರ್ ಕ್ಲೇಮ್ ನಲ್ಲಿ ಕೇಳಿರುವ ಆಸ್ತಿಗಳನ್ನು ಪ್ರತಿವಾದಿ 6 ಮತ್ತು 7 ರವರು ಸ್ವಾಧೀನ ಹೊಂದಿದ್ದಾರೆ ಅನ್ನುವುದು ಸರಿಯಲ್ಲ. ಪ್ರತಿವಾದಿ 6 ಮತ್ತು 7 ರವರಿಗೆ ತೊಂದರೆ ಕೊಡುವ ಸಲುವಾಗಿ ವಿವಿಧ ಕೋರ್ಟ್‌ಗಳಲ್ಲಿ ಹಲವಾರು ಕೇಸುಗಳನ್ನು ಅವರ ವಿರುದ್ಧ ದಾಖಲಿಸಿದ್ದೇನೆ ಅನ್ನುವುದು ಸರಿಯಲ್ಲ. ಕೌಂಟರ್ ಕ್ಲೇಮ್ ನಲ್ಲಿ ಕೇಳಿರುವ ಆಸ್ತಿಗಳು 6 ಮತ್ತು 7 ನೇ ಪ್ರತಿವಾದಿಯರ ಹೆಸರಿನಲ್ಲಿ ಖಾತೆ ಇದೆ ಮತ್ತು ಅವರೇ ಕಂದಾಯ ಕಟ್ಟುತ್ತಿದ್ದಾರೆ ಅನ್ನುವುದು ಸರಿಯಲ್ಲ. ಈಗ ತೋರಿಸಿದ ಸಾಕ್ಷಿ ಹೇಳಿಕೆಯು ನನ್ನನ್ನು ಒಎಸ್ ನಂ.4998/2017 ರಲ್ಲಿ ಮಾಡಿ ಪಾಟೀಸವಾಲು ಇರುತ್ತದೆ ಅನ್ನುವುದು ನಿಜ. ಸಾಕ್ಷಿ ಅದನ್ನು ಒಪ್ಪಿದ ಕಾರಣ ಅದನ್ನು **ನಿಡಿ.1** ಎಂದು ಗುರುತಿಸಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**(ಪದ್ಮ ಪ್ರಸಾದ್ )**
**2 ನೇ ಅಪರ ನಗರ ಸಿವಿಲ್ ಮತ್ತು**
**ವಿಶೇಷ ನ್ಯಾಯಾಧೀಶರು, ಬೆಂಗಳೂರು ನಗರ.**